ಸಮಾಧಿಗಳ ಮೇಲೆ ಕೂರಬೇಡಿ ಮತ್ತು ಅವುಗಳ ಕಡೆಗೆ ನಮಾಝ್ ಮಾಡಬೇಡಿ

ಅಬೂ ಮರ್ಸದ್ ಗನವಿ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅವರು ಹೇಳಿದರು:
ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು:
"ಸಮಾಧಿಗಳ ಮೇಲೆ ಕೂರಬೇಡಿ ಮತ್ತು ಅವುಗಳ ಕಡೆಗೆ ನಮಾಝ್ ಮಾಡಬೇಡಿ."
[صحيح] [رواه مسلم]

ಸಮಾಧಿಗಳ ಮೇಲೆ ಕೂರುವುದನ್ನು ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ವಿರೋಧಿಸಿದ್ದಾರೆ. ಅದೇ ರೀತಿ, ಸಮಾಧಿಗಳ ಕಡೆಗೆ ನಮಾಝ್ ಮಾಡುವುದನ್ನೂ ವಿರೋಧಿಸಿದ್ದಾರೆ. ಅಂದರೆ ಸಮಾಧಿಯು ಕಿಬ್ಲದ ದಿಕ್ಕಿನಲ್ಲಿರುವ ಸ್ಥಿತಿಯಲ್ಲಿ ಅದರ ಹಿಂದೆ ನಮಾಝ್ ಮಾಡುವುದು. ಏಕೆಂದರೆ ಇದು ಬಹುದೇವಾರಾಧನೆಗೆ ಕಾರಣವಾಗುತ್ತದೆ.

http://www.sunnah.global/hadeeth/kn/show/10647